## ಪತ್ರಿಕಾ ಪ್ರಕಟಣೆ

ವಿಜಯಪುರ
ದಿನಾಂಕ: 28.08.2021.

**1] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 270/2021 ಕಲಂ: 279. 304(ಎ) ಐಪಿಸಿ.**

ದಿನಾಂಕ: 26.08.2021 ರಂದು 22.30 ಗಂಟೆಯಿಂದ ದಿನಾಂಕ: 27.08.2021ರ ಬೆಳಗಿನ 06.00 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿಯ ಆರೋಪಿತನಾದ ಮೃತ ಅನೀಲ ಮಾದೇವ ಬಿರಾದಾರ ವಯಾ 32 ವರ್ಷ ಸಾ: ದಂಧರಗಿ ಮೊಟಾರ್ ಸೈಕಲ್ ನಂ ಕೆ.ಎ:42 ಎಚ್:8519 ನೇದರ ಚಾಲಕ ಈತನು ತಾನು ನಡೆಯಿಸುತ್ತಿದ್ದ ಮೋಟಾರ್ ಸೈಕಲನ್ನು ವಿಜಯಪುರ ಕಡೆಯಿಂದ ಇಟ್ಟಂಗಿಹಾಳ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಹೋಗಿ ಇಟ್ಟಂಗಿಹಾಳ ಕ್ರಾಸ್ ಹತ್ತಿರ ಅದರ ಹತೋಟಿ ಕಳೆದುಕೊಂಡು ಸ್ಕಿಡ್ ಆಗಿ ಬಿದ್ದು ತನ್ನ ತಲೆಗೆ, ಹಣೆಗೆ, ಮೆಲಕಿಗೆ ಭಾರಿಗಾಯ ಪೆಟ್ಟುಗಳಾಗಿ ತೀರಿಕೊಂಡಿರುತ್ತಾನೆ ಅಂತಾ ವಗೈರೆ ಫಿರ್ಯಾದದಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಮಾದೇವಿ ಅನೀಲ ಬಿರಾದಾರ ಸಾ: ದಂಧರಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.08.2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 81/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 26.08.2021 ರಂದು 16.00 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಶ್ರೀಮತಿ ರೇಣುಕಾ ಗಂ: ಭೀರಣ್ಣ ಜಲ್ಲಿ ಸಾ: ಮಣಂಕಲಗಿ ತಾ; ಚಡಚಣ ವಯಾ 25 ವರ್ಷ ಉದ್ಯೋಗ ಕೂಲಿ ಕೆಲಸ ಇವಳು ಮಣಮಂಕಲಗಿ ಗ್ರಾಮದ ತನ್ನ ಮನೆಯಿಂದ ಶ್ರಾವಣ ಶುಕ್ರವಾರದ ಪೂಜೆಯ ಸಲುವಾಗಿ ಲೋಣಿ ಗ್ರಾಮಕ್ಕೆ ಹೋಗಿ ಪೂಜಾ ಸಾಮಾನುಗಳನ್ನು ತರುತ್ತೇನೆ ಅಂತಾ ಹೇಳಿ ಹೋದವಳು ಇಲ್ಲಿಯವರೆಗೆ ಮರಳಿ ಮನೆಗೂ ಬಾರದೆ ಮತ್ತೆ ಯಾವ ಸಂಬಂದಿಕರ ಮನೆಗೂ ಹೋಗದೇ ಎಲ್ಲಿಯೋ ಕಾಣೆಯಾಗಿರುತ್ತಾಳೆ ಈ ಬಗ್ಗೆ ಭೀರಣ್ಣ ಭೀಮಣ್ಣ ಜಲ್ಲಿ ಸಾ॥ ಮಣಂಕಲಗಿ ತಾ; ಚಡಚಣ ಜಿ; ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.08,2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನಾ. ನಂ: 142/2021 ಕಲಂ: 15 (ಎ), 32 (3) ಕೆ.ಇ.ಆ್ಯಕ್ಟ್.**

ದಿನಾಂಕ: 27.08.2021 ರಂದು 09.45 ಗಂಟೆಗೆ ಇದರಲ್ಲಿ ಆರೋಪಿತನಾದ ರಾಜು ಬಾಪುಗೌಡ ಬಿರಾದಾರ, ಹಿಂದೂ ರೆಡ್ಡಿ, ಸಾ: ಬನಹಟ್ಟಿ ತಾ॥ ಸಿಂದಗಿ ಈತನು ಸರಕಾರದಿಂದ ಯಾವುದೇ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಬನಹಟ್ಟಿ ಗ್ರಾಮದ ಬಸ್ ನಿಲ್ದಾಣದ ಮುಂಭಾಗ ಸಾರ್ವಜನಿಕ ರಸ್ತೆಯ ಮೇಲೆ ಆರೋಪಿತನು ಸಾರ್ವಜನಿಕರಿಗೆ ಸಾರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ನಮ್ಮ ತಾಬಾಕ್ಕೆ ಸಿಕ್ಕಿದ್ದು, ಈ ಬಗ್ಗೆ ಸ॥ತ॥ ರವಿ ಯಡವನ್ನವರ ಪಿಎಸ್ಐ ದೇವರ ಹಿಪ್ಪರಗಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.08,2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಕೂಡಗಿ ಪೊಲೀಸ ಠಾಣೆ ಗುನ್ನಾ. ನಂ: 73/2021 ಕಲಂ: 78 (3) ಕೆ.ಪಿ.ಆ್ಯಕ್ಟ್.**

ದಿನಾಂಕ: 26.08.2021 ರಂದು 16:10 ಗಂಟೆಗೆ ಇದರಲ್ಲಿ ಆರೋಪಿತನಾದ ಹಣಮಂತ ಯಮನಪ್ಪ ಚಲವಾದಿ ಸಾ॥ ಮುತ್ತಗಿ ತಾ॥ ಬ.ಬಾಗೇವಾಡಿ ಈತನು ಮುತ್ತಗಿ ಗ್ರಾಮದ ಅಂಬೇಡ್ಕರ ಸರ್ಕಲ್ ಹತ್ತಿರ ಪಾನಶಾಪ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಒಂದು ರೂಪಾಯಿಗೆ 80=00 ರೂಪಾಯಿ ಕೊಡುವ ಕರಾರಿನ ಮೇಲೆ ಮಟಕಾದ ಓಸಿ ನಂಬರ ಬರೆದುಕೊಂಡು ಓಸಿ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: 1) ಒಟ್ಟು ರೋಖ ಹಣ 920=00 ರೂ, 2) ಓ.ಸಿ ನಂಬರ ಬರೆದ ಚೀಟಿ ಒಂದು ಕಿ॥ 00=00, 3) ಬಾಲ ಪೆನ್ ಒಂದು ಕಿ॥ 00=00 ಈ ಬಗ್ಗೆ ಸ॥ತ॥ ಶ್ರೀಮತಿ ರೇಣುಕಾ ಜಕನೂರ ಪಿ.ಎಸ್.ಐ ಕೂಡಗಿ ಪಿ.ಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.08,2021 ರಂದು ಕೂಡಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ನಿಡಗುಂದಿ ಪೊಲೀಸ ಠಾಣೆ ಗುನ್ನಾ. ನಂ: 104/2021 ಕಲಂ: 78 (3) ಕೆ.ಪಿ.ಆ್ಯಕ್ಟ್.**

ದಿನಾಂಕ: 27/08/2021 ರಂದು 21:15 ಗಂಟೆಗೆ ಇದರಲ್ಲಿ ಆರೋಪಿತನಾದ ಲಕ್ಷ್ಮಣ ಶಿರಿಯಪ್ಪ ಧರ್ಮರ ಸಾ॥ ಚಿಮ್ಮಲಗಿ ಬಾಗ 1ಎ ತಾ॥ ನಿಡಗುಂದಿ ಈತನು ತನ್ನ ಪಾಯ್ದೆಗೋಸ್ಕರ, 01 ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲಿಂದ ಮಟಕಾ ಅಂಬುವ ಓ.ಸಿ ಜೂಜಾಟವನ್ನು ಆಡುವಾಗ ಸಿಕ್ಕ ಅಪರಾಧ. ಜಪ್ತಾದ ಮಾಲು 1. ರೋಖ ಹಣ 410/– ರೂ, 2. ಓ.ಸಿ ನಂಬರ ಬರೆದ ಚೀಟಿ ಒಂದು 3. ಬಾಲ್ ಪೆನ್ನು ಒಂದು ಈ ಬಗ್ಗೆ ಸ॥ತ॥ ಶ್ರೀ ಚಂದ್ರಶೇಖರ. ವಾಯ್. ಹೇರಕಲ್ ಪಿ.ಎಸ್.ಐ (ಕಾ&ಸು) ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 27.08,2021 ರಂದು ನಿಡಗುಂದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.